ಸಾಕ್ಷಿಯನ್ನು ದಿಃ**06.11.2019** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀಸವಾಲುಃ ವಾದಿ ಪರ ವಕೀಲರಾದ ಶ್ರೀ ಎಸ್ ಆರ್ ವಕೀಲರಿಂದಃ

ನನ್ನ ಮದುವೆಯಾಗಿ 24 ವರ್ಷ ಆಗಿರುತ್ತದೆ. ನಾನು ನನ್ನ ಗಂಡನ ಮನೆಯಲ್ಲಿ ವಾಸವಾಗಿದ್ದೇನೆ. ನಾನು ನನ್ನ ಗಂಡನ ಮನೆಯಲ್ಲಿ ವಾಸ ಇರುವುದಕ್ಕೆ ನನ್ನ ಗಂಡನಾಗಲಿ ಅವರ ಸಂಬಂಧಿಕರಾಗಲಿ ನನಗೆ ಯಾವುದೇ ತೊಂದರೆ ನೀಡಿರುವುದಿಲ್ಲ. ನಾನು ಮದುವೆಯಾದ ನಂತರ 2015 ಇಸ್ವಿಯವರೆಗೂ ನನ್ನ ತಂದೆಯ ವಿರುದ್ದ ದಾವೆ ಸಲ್ಲಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಭಾಗ ಕೊಡದ ಕಾರಣ ದಾವೆ ಸಲ್ಲಿಸಿದ್ದೇನೆ. ನನಗೆ ಭಾಗ ಬರಬೇಕು ಎಂದು ನನ್ನ ತಂದೆಗೆ ಮೌಖಿಕವಾಗಿ ಕೇಳಿರುತ್ತೇನೆ. 1 ನೇ ದಾವಾ ಆಸ್ತಿಯ ಮೇಲೆ ಕುಟುಂಬದ ಅಭಿವೃದ್ದಿ ಮತ್ತು ಜಮೀನಿನ ಅಬಿವೃದ್ದಿಗೆ 2 ನೇ ಪ್ರತಿವಾದಿ ಎಸ್ ಬಿ ಎಂ ಬ್ಯಾಂಕಿನಲ್ಲಿ ಆಧಾರ ಮಾಡಿ ಸಾಲ ಪಡೆದಿರುತ್ತಾರೆಂದರೆ ಸರಿಯಲ್ಲ. ಸದರಿ ಬ್ಯಾಂಕಿನ ಸಾಲವನ್ನು ತೀರಿಸುವ ಸಲುವಾಗಿ 2 ನೇ ಪ್ರತಿವಾದಿ ಜಗದೀಶ ಎಂಬುವವರು 3 ಲಕ್ಷ ಸಾಲವಾಗಿ ಪಡೆದಿರುತ್ತಾರೆಂದರೆ ಸರಿಯಲ್ಲ. ಈ ದಾವಾ ಆಸ್ತಿಯ ಐಟಂ ನಂ. 1 ರ ಖಾತೆ ನನ್ನ ತಾತನ ಹೆಸರಿನಲಿರುತ್ತದೆ. ನನ್ನ ತಾತನ ಹೆಸರಿನಿಂದ ನನ್ನ ಹೆಸರಿಗೆ ಖಾತ ಬದಲಾವಣೆ ಮಾಡಿಕೊಡಿ ಎಂದು ನಾನು ಎಸಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುವುದಿಲ್ಲ. ದಾವಾ ಆಸ್ತಿ ಐಟಂ ನಂ.2 ನಮ್ಮ ಪಿರ್ತಾಜಿತ ಆಸ್ತಿ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರಪಡಿಸಿರುವುದಿಲ್ಲ. ಐಟಂ ನಂ.2 ದಾವಾ ಆಸ್ತಿ ನನ್ನ ತಂದೆಯ ಹೆಸರಿನಲ್ಲಿದೆ. ಐಟಂ ನಂ 2 ದಾವಾ ಆಸ್ತಿಯಲ್ಲಿ ನನ್ನ ತಂದೆ ದಿಃ21.06.1974 ರಲ್ಲಿ 3 ನೇ ವ್ಯಕ್ತಿಯಿಂದ ಖರೀದಿ ಮಾಡಿರುತ್ತಾರೆಂದರೆ ಸರಿ. ನನ್ನ ತಂದೆ ಈ ದಾವೆ ಹೂಡಿದ ನಂತರ ತೀರಿಕೊಂಡಿರುತ್ತಾರೆಂದರೆ ಸರಿ. ಈ ದಾವೆ ಆಸ್ತಿ ಬಿ ಷೆಡ್ಯೂಲ್ ನ ಐಟಂ ನಂ.1 ಮತ್ತು 2 ರ ಆಸ್ತಿಗೆ ಸಂಬಂಧಪಟ್ಟಂತೆ ಮೂಲ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ನಾನು ನನ್ನ ತಿದ್ದುಪಡಿ ವಾದ ಪತ್ರದಲ್ಲಿ ನನ್ನ ಗಂಡನ ಹೆಸರಿನಲ್ಲಿ ಯಾವುದೆ ಮನೆ ನಿವೇಶನ ಇಲ್ಲ, ನಾನು ವಾಸ ಮಾಡಲು ಯಾವುದೆ ಮನೆ ಇಲ್ಲ ಎಂದು ಹೇಳಿರುವುದಿಲ್ಲ. ಪ್ರತಿವಾದಿಗಳು ನನ್ನ ಮದುವೆಯಲ್ಲಿ ನನ್ನ ಮದುವೆ ಮಾಡಲು ಸಾಲ ಮಾಡಿರುತ್ತಾರೆಂದರೆ ಸರಿಯಲ್ಲ. ನನಗೆ ಬರಬೇಕಾದ ಭಾಗವನ್ನು ಪ್ರತಿವಾದಿಗಳು ನನ್ನ ಮದುವೆ ಸಮಯದಲ್ಲಿ ನಗದಾಗಿ ನೀಡಿರುತ್ತಾರೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಯವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿದ ನಂತರ, ಓದಿ ಹೇಳಿದ ಮೇರೆಗೆ ಸಾಕ್ಷಿ ಸರಿ ಇದೆ ಎಂದು ಒಪ್ಪಿ ತಮ್ಮ ಸಹಿ ಮಾಡಿರುತ್ತಾರೆ.)

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು
ಜೆ.ಎಂ.ಎಫ್.ಸಿ. ತಿ.ನರಸೀಪುರ